24-7-2024

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ರವರು ನೀಡಿರುವ ಶೂನ್ಯವೇಳೆಯ ಸೂಚನಾ ಪತ್ರಕ್ಕೆ ಉತ್ತರ

---

ವಿಷಯ: ಹೋಸದಿಗಂತ ದಿನಪತ್ರಿಕೆಯಲ್ಲಿ 'ಗುಮ್ಮಟ ನಗರಿಯಲ್ಲಿ ಬಲಗೊಳ್ಳುತ್ತಿದೆ ಮಾದಕ ಜಾಲ! ಪ್ರಕಟವಾಗಿರುವ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

"ರಿಮ್ಜಿಮ್" ಎನ್ನುವ ಮಾದಕ ಪಾನ್ ಹಾವಳಿ ಗುಮ್ಮಟ ನಗರಿ ವಿಜಯಪೂರದಲ್ಲಿ ಸದ್ಯ ಜೋರಾಗಿ ಕೇಳಿ ಬರುತ್ತಿದ್ದು, ಈ ಚಟದ ಸುಳಿಗೆ ಸಿಕ್ಕ ಯುವಕರ ತಲೆ ಮಾತ್ರ ಧಿಮಿಮ್ ಧಿಮ್ಮಿಮ್ ಎಂದು ನಲುಗುವಂತಾಗಿದೆ. ನಗರದಲ್ಲಿ ರಿಮ್ಜಿಮ್, ಫುಲ್ ಚಂದ್ ಸೇರಿದಂತೆ 25 ನಮೂನೆಯಲ್ಲಿ ಮಾರಾಟಗೊಳ್ಳುತ್ತಿರುವ ಮಾದಕ ಪಾನ್ ತಿನ್ನುವ ಚಟಕ್ಕೆ ಅಂಟಿಕೊಂಡ ಯುವಕರು. ತಮ್ಮ ಬದುಕು ಮೂರಾಬಟ್ಟೆ ಮಾಡಿಕೊಳ್ಳುತ್ತಿರುವುದು ದುರಂತ, ಬಿಸಿಲೂರಿನಲ್ಲಿ ಮಾದಕ ಪಾನ್ ಸೇವನೆ ಹಾಗೂ ಮಾರಟ ಜಾಲ ಬಲಗೊಳ್ಳುತ್ತಿದ್ದು. ಅದರಲ್ಲೂ ಎಂಬಿಬಿಎಸ್, ಎಂಜಿನಿಯರಿಂಗ್, ಪದವಿ ಹಂತದ ಯುವಕರು ಈ ಪಾನ್ ತಿನ್ನುವ ಶೋಕಿಯಿಂದ ಪಕ್ಕಾ ವ್ಯಸನಿಗಳಾಗಿದ್ದು, ಓದು, ಬರಹ, ಕಾಲೇಜ್, ಕೇರಿಯರ್ ಯಾವುದನ್ನು ಲೆಕ್ಕಿಸದೇ ನಶೆಯಲ್ಲಿಯೇ ತೇಲುತ್ತಿರುವ ತಮ್ಮ ಮಕ್ಕಳನ್ನು ಕಂಡು ಪಾಲಕರು ಆತಂಕಗೊಳ್ಳುವಂತಾಗಿದೆ.

ಈ ಮಾದಕ ಪಾನ್ ವ್ಯಸನಕ್ಕೆ ಕೇವಲ ಜನಸಾಮಾನ್ಯರ ಮಕ್ಕಳಲ್ಲ ಪ್ರತಿಷ್ಠಿತ ರಾಜಕಾರಣಿ ಹಾಗೂ ಪೊಲೀಸ್ ಅಧಿಕಾರಿಗಳ ಮಕ್ಕಳೂ ಸಿಲುಕಿಗೊಂಡಿದ್ದಾರೆ. ಇಂತಹ ವ್ಯಸನಕ್ಕೆ ಸಿಲುಕಿದ ಆದೆಷ್ಟೋ ಯುವಕರು ತಮ್ಮ ಜೀವನವನ್ನು ನರಕ ಮಾಡಿಕೊಂಡಿದ್ದಾರೆ. ನಗರದ ಪಾನ್-ಅಂಗಡಿಗಳಲ್ಲಿನ ಪಾನ್-ನಲ್ಲಿ ಮಾದಕ ವಸ್ತುಗಳನ್ನು ಹಾಕಿ ಮಾರಾಟ ಮಾಡುವ ಅಕ್ರಮ ದಂಧೆ ಎಗ್ಗಿಲ್ಲದೆ ನಡೆಯುತ್ತಿದ್ದು, ಯುವಕರು ಈ ಅಕ್ರಮ ದಂಧೆಕೋರರ ಬಂಡವಾಳವಾಗಿದ್ದಾರೆ.

ಮಾದಕ ವ್ಯಸನವು ಯುವಕರ ಆರೋಗ್ಯ, ಶಿಕ್ಷಣ, ಹಾಗೂ ವೈಯಕ್ತಿಕ ಸಂಬಂಧಗಳನ್ನು ಹಾಗೂ ಜೀವನವನ್ನು ಹಾನಿ ಮಾಡುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ದಂಧೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಗೃಹ ಸಚಿವರನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.

ಉತ್ತರ:

ದಿನಾಂಕ:22.07.2024 ರಂದು ಹೊಸ ದಿಗಂತ ದಿನಪತ್ರಿಕೆಯಲ್ಲಿ ಪ್ರಕಟವಾದಂತಹ ರಿಮ್ಜಿಮ್ ಪಾನ್ ಹಾವಳಿಗೆ ಯುವಕರ ತಲೆ ದಿಮ್‌ದಿಮ್ ಎಂಬ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟವಾಗಿದ್ದು, ಈ ಕುರಿತು ವಿಜಯಪುರ ಜಿಲ್ಲೆಯ ಗಾಂಧಿ ಚೌಕ ಪೊಲೀಸ್ ಠಾಣೆ ಯವರು ವಿಜಯಪುರ ನಗರದ ಕೇಂದ್ರ ಬಸ್ ನಿಲ್ದಾಣದ ಸುತ್ತಲು ಇರುವ ಪಾನ್ ಅಂಗಡಿಗಳನ್ನು ಪರಿಶೀಲಿಸಿದಾಗ ಯಾವುದೇ ಮಾದಕ ವಸ್ತುಗಳು ದೊರೆತಿರುವುದಿಲ್ಲ. ಆ ಕಾಲಕ್ಕೆ ಪಾನ್ ಅಂಗಡಿಗಳಲ್ಲಿದ್ದ ಪಾನ್ ಮಾಡಲು ಉಪಯೋಗಿಸುತ್ತಿರುವ ಸಾಮಗ್ರಿಗಳನ್ನು ಫುಡ್ ಇನ್ಸ್‌ಪೆಕ್ಟರ್ ರವರ ಸಹಾಯದಿಂದ ಅವುಗಳನ್ನು ಪರೀಕ್ಷಿಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಈ ಕುರಿತು ವರದಿ ಸ್ವೀಕೃತಗೊಂಡ ನಂತರ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವಿಜಯಪುರ ನಗರದ ಮತ್ತು ಸುತ್ತ-ಮುತ್ತಲು ಇರುವ ಪಾನ್ ಅಂಗಡಿಗಳ ಮೇಲೆ ತಪಾಸಣೆ ಕಾರ್ಯಾಚರಣೆ ಮುಂದುವರೆದಿದೆ.

ಒಇ 36 ಪಿಎನ್‌ಡಿ 2024(ಇ)

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು